ಆಗ ಶ್ರೀ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಬೇಸಿಗೆಯಲ್ಲಿ ಪುರೀಕ್ಷೇತ್ರದಲ್ಲಿ ವಾಸಮಾಡುತ್ತಿದ್ದರು. ಬಾಬುರಾಮ ಮಹಾರಾಜ್ (ಸ್ವಾಮಿ ಪ್ರೇಮಾನಂದರು) ಹಾಗೂ ಮಹಾಪುರುಷ ಮಹಾರಾಜರು (ಸ್ವಾಮಿ ಶಿವಾನಂದರು) ಬೇಲೂರು ಮಠದ ಕೆಲಸ ಕಾರ್ಯಗಳನ್ನೆಲ್ಲ ನೋಡಿಕೊಳ್ಳುತ್ತಿದ್ದರು, ಗೋಪಾಲ ಅಣ್ಣ (ಸ್ವಾಮಿ ಅದ್ವೈತಾನಂದರು), ಸ್ವಾಮಿ ನಿತ್ಯಾನಂದರು, ಗುಪ್ತ ಮಹಾರಾಜ್ (ಸ್ವಾಮಿ ಸದಾನಂದರು) ಆಗ ಬೇಲೂರು ಮಠದಲ್ಲಿ ಇದ್ದರು. ಆ ಸಮಯದಲ್ಲಿ ಶರತ್ ಮಹಾರಾಜ್ ಕಲ್ಕತ್ತೆಯಿಂದ ಬೇಲೂರು ಮಠಕ್ಕೆ ಬರುತ್ತಿದ್ದರು. ಒಂದೊಂದು ಬಾರಿ ೨-೩ ದಿನ ಅಲ್ಲೇ ತಂಗುತ್ತಿದ್ದರು. ಸಾಮಾನ್ಯವಾಗಿ ಬಂದ ದಿನವೇ ಮರಳಿ ಹೋಗುತ್ತಿದ್ದರು. ನಾನು ಬೇಲೂರು ಮಠದಲ್ಲಿ ಸೇರಿಕೊಂಡ ವರ್ಷವೇ (ಅಂದರೆ, ೧೯೦೮ರಲ್ಲಿ) ಪುರಿ ಜಿಲ್ಲೆಯಲ್ಲಿ ರಾಮಕೃಷ್ಣ ಮಿಷನ್ ಬರಗಾಲದ ಪರಿಹಾರ ಕಾರ್ಯವನ್ನು ಆರಂಭಿಸಿತ್ತು. ಪುರಿಗೆ ಸಮೀಪದಲ್ಲಿರವ ಚಿಲಿಕಾ ಸರೋವರದ ಮಧ್ಯದಲ್ಲಿ ಅನೇಕ ದ್ವೀಪಗಳಿವೆ; ಆ ಎಲ್ಲ ದ್ವೀಪಗಳಲ್ಲೂ ಬೆಳೆಯಾಗದೆ, ದುರ್ಭಿಕ್ಷವುಂಟಾಗಿತ್ತು. ಅಲ್ಲಿ ನಡೆದ ಪರಿಹಾರ ಕಾರ್ಯಗಳು ಹತ್ತು ತಿಂಗಳ ಕಾಲ ನಡೆದವು. ೧೯೧೮ರ ನವೆಂಬರ್ ತಿಂಗಳ ಮೊದಲ ವಾರದಲ್ಲಿ ಆ ಎಲ್ಲ ಸೇವಾ ಕಾರ್ಯಗಳನ್ನು ನಿಲ್ಲಿಸಲಾಯಿತು. ಸುಧೀರ್ ಮಹಾರಾಜರ (ಸ್ವಾಮಿ ಶುದ್ಧಾನಂದರು) ಸೂಚನೆಯಂತೆ, ಶರತ್ ಮಹಾರಾಜರ ಅನುಮತಿಯೊಂದಿಗೆ ಕೊನೆಯ ಐದು ತಿಂಗಳ ಕಾಲ ನನಗೂ ಆ ಪರಿಹಾರ ಕಾರ್ಯಗಳಲ್ಲಿ ಭಾಗವಹಿಸುವ ಸೌಭಾಗ್ಯ ದೊರೆಯಿತು. ಚಿಲಿಕಾ ಸರೋವರದಿಂದ ಮರಳಿ ಬಂದು, ನಾನು ಬೇಲೂರು ಮಠದಲ್ಲೇ ಇದ್ದೆ. ಕೆಲವು ದಿನಗಳ ನಂತರ, ಶ್ರೀರಾಮಕೃಷ್ಣರ ಜಯಂತಿಯ ಆಚರಣೆಯ ಸಮಯದಲ್ಲಿ, ದೇವಾಲಯದ ಭಂಡಾರದಲ್ಲಿ (ಅಡುಗೆ ಮನೆ) ಬಾಬುರಾಮ ಮಹಾರಾಜರು ನನ್ನನ್ನು ನೇಮಕ ಮಾಡಿದರು. ಪೂಜೆಗೆ ಬೇಕಾದದ್ದನ್ನೆಲ್ಲ ಅಣಿಮಾಡಿಕೊಡುವುದು ನನ್ನ ದಿನನಿತ್ಯದ ಕೆಲಸವಾಯಿತು.

೧೯೧೯ನೇ ಇಸವಿ. ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣರ ಜಯಂತಿಗೆ ಮೂರು-ನಾಲ್ಕು ದಿನಗಳ ಮುನ್ನ, ಶಿವಚತುರ್ದಶಿಯಂದು ರಾತ್ರಿ ಹೋಮ ನಡೆಯುತ್ತಿದ್ದ ಕೋಣೆಯಲ್ಲಿ ಶರತ್ ಮಹಾರಾಜರು ಒಂದೇ ಕಡೆ ನಾಲ್ಕು ಪ್ರಹರ ಕುಳಿತಿದ್ದು ಪೂಜೆ ಮಾಡಿದ್ದನ್ನು ಕಂಡು ನಾನು ಬೆರಗಾಗಿದ್ದೆ. ಶ್ರೀರಾಮಕೃಷ್ಣರ ಜಯಂತಿಯಂದು ರಾತ್ರಿ ಹೊತ್ತು ಶರತ್ ಮಹಾರಾಜರು, ಪ್ರತಿ ವರ್ಷವೂ 'ದುಃಖಿನಿ ಬ್ರಾಹ್ಮಣಿ ಕೋಲೇ ಕೇ ಶುಯೇಛೇ ಆಲೋ ಕೊರೇ'[೧] ಎಂಬ ಹಾಡನ್ನು ದೇವಾಲಯದಲ್ಲಿ ಹಾಡುತ್ತಿದ್ದುದನ್ನು ಕೇಳಿದ್ದೇನೆ. ಅದೇ ರೀತಿ, ಸ್ವಾಮಿ ವಿವೇಕಾನಂದರ ಜಯಂತಿಯಂದು ಅವರು 'ಏಕ ರೂಪ ಅರೂಪ-ನಾಮ-ಮರಣ ಅತೀತ-ಆಗಾಮಿಕಾಲ ಹೀನ ದೇಶಹೀನ ಸರ್ವ ಹೀನ ನೇತಿ ನೇತಿ ವಿರಾಮ ಯಥಾಯ್' ಹಾಡನ್ನು ಕೂಡ ಹಾಡುತ್ತಿದ್ದರು. ಇದಲ್ಲದೆ, ಬೇರೆ ಸಂದರ್ಭಗಳಲ್ಲೂ ಅವರು ಹಲವು ಹಾಡುಗಳನ್ನು ಹಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ಎಷ್ಟು ಅದ್ಭುತವಾದ ಕಂಠ! ಹಾಡುವ ಶೈಲಿ ಕೂಡ ಎಷ್ಟೊಂದು ಅಸಾಧಾರಣವಾಗಿತ್ತು!

ಈ ವರ್ಷದಲ್ಲೇ 'ಉದ್ಬೋಧನ'ದ ಸ್ವಂತದ ಮನೆಯ ನಿರ್ಮಾಣ ಪೂರ್ಣಗೊಂಡಿತು. ಜಯಂತಿಯ ನಂತರ ಶ್ರೀಮಾತೆಯವರಿಂದ ಶರತ್ ಮಹಾರಾಜರಿಗೆ ಪತ್ರ ಬಂದಿತ್ತು - ಮಾವಂದಿರು (ಶ್ರೀಮಾತೆಯವರ ತಮ್ಮಂದಿರು) ಪಾಲು ಮಾಡಿಕೊಳ್ಳಲು ಬಯಸಿದ್ದಾರೆ; ಅದಕ್ಕಾಗಿ ಶರತ್ ಮಹಾರಾಜರು ಅಲ್ಲಿಗೆ ಹೋಗಿ ಪಾಲು ಮಾಡುವ ಕೆಲಸವನ್ನು ನಡೆಸಿಕೊಡಬೇಕು ಎಂಬುದಾಗಿ. ಬೇಲೂರು ಮಠದಲ್ಲಿದ್ದ ಶರತ್ ಮಹಾರಾಜರಿಗೆ ಈ ವಾರ್ತೆಯನ್ನು ತಲುಪಿಸಲಾಯಿತು. ನಾನು ಬಾಬುರಾಮ್ ಮಹಾರಾಜರ ಬಳಿ ಹಠ ಮಾಡಿದೆ, 'ಶ್ರೀಮಾತೆಯವರನ್ನು ನಾನೆಂದೂ ನೋಡಿಯೇ ಇಲ್ಲ; ಶರತ್ ಮಹಾರಾಜರೊಂದಿಗೆ ನಾನೂ ಹೋಗುತ್ತೇನೆ' ಎಂಬುದಾಗಿ. ಬಾಬುರಾಮ್ ಮಹಾರಾಜರು ಸಂತಸದಿಂದ ಅನುಮತಿ ನೀಡಿದರು.

೧೯೧೯ನೇ ಇಸವಿಯ ಮಾರ್ಚ್ ೨೩ನೇ ದಿನಾಂಕ. ಶರತ್ ಮಹಾರಾಜರು ಬೆಳಿಗ್ಗೆ ಗೋಮೋ[೨] ಪ್ಯಾಸೆಂಜರ್ ಟ್ರೈನ್‌ನಲ್ಲಿ ಹೊರಟರು. ಜೊತೆಯಲ್ಲಿ ಯೋಗಿನ್-ಮಾ ಹಾಗೂ ಗೋಲಾಪ್-ಮಾ ಕೂಡ ಇದ್ದರು. ರೈಲು ಸಿಳ್ಳು ಹಾಕುತ್ತ ಹೌರಾ ರೈಲ್ವೇ ಸ್ಟೇಶನ್ನಿನಿಂದ ಹೊರಟಿತು.

ರೈಲು ಖರಗ್‌ಪುರ್ ಸ್ಟೇಶನ್ ತಲುಪಿತು. ಊಟವನ್ನು ಖರೀದಿಸಿ, ಮಹಾರಾಜ್ ಮತ್ತು ನಾನು ಊಟ ಮಾಡಿದೆವು. ಯೋಗಿನ್-ಮಾ ಹಾಗೂ ಗೋಲಾಪ್-ಮಾ ರೈಲಿನಲ್ಲಿ ಏನನ್ನೂ ತಿನ್ನಲಿಲ್ಲ. ಸಂಜೆಯ ಹೊತ್ತಿಗೆ ರೈಲು ವಿಷ್ಣುಪುರವನ್ನು ತಲುಪಿತು. ಅಲ್ಲಿ ನಾವೆಲ್ಲರೂ ಇಳಿದೆವು. ಒಂದು ಹೋಟೆಲಿನಲ್ಲಿ ನಮಗೆ ಊಟದ ವ್ಯವಸ್ಥೆಯಾಗಿತ್ತು. ಊಟ ಮಾಡಿದ ನಂತರ ಪ್ರಯಾಣ ಮುಂದುವರಿಸಲು ಶರತ್ ಮಹಾರಾಜರು ಮುಂದಾದರು.

ಸರಿಯಾದ ಸಮಯಕ್ಕೆ ಎರಡು ಎತ್ತಿನ ಗಾಡಿಗಳು ಬಂದು ನಿಂತವು. ಒಂದು ಗಾಡಿಯಲ್ಲಿ ಯೋಗಿನ್-ಮಾ ಹಾಗೂ ಗೋಲಾಪ್-ಮಾ ಹತ್ತಿ ಕುಳಿತರು. ಇನ್ನೊಂದರಲ್ಲಿ ಶರತ್ ಮಹಾರಾಜ್ ಹತ್ತಿ ಕುಳಿತು ನನಗೆ ಹೇಳಿದರು, ''ಹತ್ತಿ ಕುಳಿತುಕೋ.'' ಅನಾಹುತವಾಯಿತಲ್ಲ! ಒಂದೇ ಗಾಡಿಯಲ್ಲಿ ನಾವಿಬ್ಬರೂ ಮಲಗುವುದು ಹೇಗೆ? ಮೊದಲೇ ಅವರದು ದಪ್ಪನೆಯ ಶರೀರ; ದಪ್ಪವಿಲ್ಲದಿದ್ದರೂ ಅವರದು ದೊಡ್ಡ ಮೈಕಟ್ಟು. ಆದರೆ ಅದನ್ನು ಆಗ ಏನನ್ನು ಹೇಳಲಿ? ರಾತ್ರಿಯೆಲ್ಲ ಶರತ್ ಮಹಾ

೧ ಕನ್ನಡದಲ್ಲಿ - 'ವಿಪ್ರವನಿತೆ ಅಂಕದಲ್ಲಿ' ಹಾಡು *(-ಅನು)*

೨ ಗೋಮೋ (Gomoh) ಎಂಬುದು ಜಾರ್ಖಂಡ್‌ನಲ್ಲಿ ಒಂದು ಸ್ಥಳ. ಅಲ್ಲಿ ಮುಖ್ಯವಾದ ರೈಲ್ವೇ ಜಂಕ್ಷನ್ ಇದೆ. *(-ಅನು)*